# ಸ್ವಾಮಿ ಶಂಕರಾನಂದ (1880-1962)

(ರಾಮಕೃಷ್ಣ ಮಹಾಸಂಘದ ೭ನೇ ಪರಮಾಧ್ಯಕ್ಷರು)

ಮೂಲ ಬಂಗಾಳಿ: ಸ್ವಾಮಿ ಚೇತನಾನಂದ

ಅನುವಾದ: ಕುಮಾರಿ ಪಿ. ಉಷಾ



ಮನುಷ್ಯನ ಮನದಲ್ಲಿ ಮೂಡುವ ವೃತ್ತಿಗಳು ಸಮುದ್ರದ ಅಲೆಗಳಂತೆ ಏರಿಳಿಯುತ್ತವೆ. ಇಳಿದು ಲುಪ್ತವಾದ ವೃತ್ತಿಗಳನ್ನು ಚಿತ್ತಪಟಲದಲ್ಲಿ ಸ್ಮೃತಿಯಾಗಿ ಉಳಿಸುತ್ತವೆ. ಮನೋವೃತ್ತಿಗಳು ಬಲವಾಗಿದ್ದ ಪಕ್ಷದಲ್ಲಿ ಸ್ಮೃತಿಗಳೂ ಗಭೀರವಾಗಿದ್ದು ಅವು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವುವು. ಮಹಾತ್ಮರು ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿತ್ವವುಳ್ಳವರಾಗಿದ್ದು ಅವರ ದರ್ಶನ ಸ್ಮೃತಿಗಳು ಮನಸ್ಸಿನಲ್ಲಿ ಚಿರಕಾಲ ಉಳಿದುಕೊಳ್ಳುವುವು.

ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮೀಜಿಯವರ ದರ್ಶನವನ್ನು ಒಂದೇ ಒಂದು ಕ್ಷಣ ಮಾಡಿದ್ದರೂ ಅವರ ಅಮೂಲ್ಯ ಸ್ಮೃತಿಯು ಮನಃಪಟಲದಲ್ಲಿ ಅಮರವಾಗಿರುವುದು. ಸ್ವಾಮಿ ಶಂಕರಾನಂದಜಿಯವರನ್ನು ಅನೇಕ ಬಾರಿ ಕಂಡಿದ್ದೇನಾದರೂ ಅವರೊಡನೆ ಘನಿಷ್ಠ ಸಂಪರ್ಕವೇನೂ ನನಗಿರಲಿಲ್ಲ.

ಆದರೂ ವಿಕ್ಷಿಪ್ತ ಸ್ಮೃತಿಗಳನ್ನು ರೂಪಾಂತರಗೊಳಿಸುವ ಇಚ್ಛೆ ನನ್ನಲ್ಲಿ ಮೂಡಿತು. ದೇವರ ವೇದಿಕೆಯಲ್ಲಿರಿಸಿದ್ದ ಚಿಕ್ಕ ಬಿಡಿ ಹೂವೊಂದು ಅತಿ ಸಾಮಾನ್ಯವೆಂದೆನಿಸಿದರೂ ಇಂಥ ಅನೇಕ ಹೂವುಗಳನ್ನು ಪೋಣಿಸಿದ ಹಾರವು ದೇವರ ಕೊರಳಿನಲ್ಲಿ ಶೋಭಾಯಮಾನವಾಗಿ ಕಾಣಿಸುತ್ತದೆ.

೧೯೫೫ರ ಸ್ವಾಮೀಜಿಯವರ ಜಯಂತಿಯಂದು ನಾನು ಸ್ವಾಮಿ ಶಂಕರಾನಂದಜಿಯವರ ಪ್ರಥಮ ದರ್ಶನವನ್ನು ಪಡೆದೆ. ಅಂದು ಸಂಜೆ ಮಠದ ಅಂಗಳಕ್ಕೆ ಅವರು ಬಂದಿದ್ದು ನಾನವರ ಪಾದಗಳನು ಮುಟ್ಟಿ ಪ್ರಣಾಮ ಸಲ್ಲಿಸಿದಾಗ ಅವರ ಸದೃಢ ವ್ಯಕ್ತಿತ್ವವನ್ನು ಕಂಡು ಮುಗ್ಧನಾದೆ. ನಾನಾಗ ಕಾಲೇಜಿನಲ್ಲಿ ಓದುತ್ತಿದ್ದು, ಜೀವನ ಪಥದ ಮಾರ್ಗದರ್ಶನಕ್ಕಾಗಿ ಉಪದೇಶವನ್ನು ಕೋರಿ ಪತ್ರವನ್ನು ಬರೆದಾಗ ಅವರ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ಸುಪರ್ಣಾನಂದರು ಉತ್ತರವಿತ್ತರು. ೧೯೫೮ರಲ್ಲಿ ನಾನು ಅದ್ವೈತ ಆಶ್ರಮವನ್ನು ಸೇರಿದೆ. ಪೂಜನೀಯ ಮಹಾರಾಜರು ಔಷಧಿಗಾಗಿ ಅನೇಕ ಸಲ ಮಠದಿಂದ ಆದ್ವೈತ ಆಶ್ರಮಕ್ಕೆ ಫೋನ್ ಮಾಡುತ್ತಿದ್ದರು. ವೆಲಿಂಗ್‌ಟನ್ ಸ್ಕ್ವೇರ್‌ನ ಹಿಂದ್ ಸಿನೆಮಾದ ಪಕ್ಕದಲ್ಲಿ ಎಲ್. ಎಮ್. ಮುಖರ್ಜಿಯವರ ಔಷಧಾಲಯವಿತ್ತು. ಈ ಮುಖರ್ಜಿ ಕುಟುಂಬದವರು ಮಹಾರಾಜರ ಭಕ್ತರು. ಔಷಧವನ್ನು ತೆಗೆದುಕೊಂಡು ಸಂಜೆಯ ಹೊತ್ತಿಗೆ ನಾನು ಮಠಕ್ಕೆ ಹೋಗಿ ಆರತಿಯ ಮುಂಚೆ ಅವರನ್ನು ಭೇಟಿ ಮಾಡಿ ೧ ಗಂಟೆಯ ಒಳಗೆ ಅದ್ವೈತಾಶ್ರಮಕ್ಕೆ ಹಿಂದಿರುಗುತ್ತಿದ್ದೆ. ಮಹಾರಾಜರು ಗಂಭೀರವಾಗಿ ಕುರ್ಚಿಯಲ್ಲಿ ಕುಳಿತಿರುತಿದ್ದು ಸಾಧು-ಭಕ್ತರುಗಳು ಬಾಗಿಲಿನ ಬಳಿಯಿಂದಲೇ ಅವರಿಗೆ ಪ್ರಣಾಮ ಸಲ್ಲಿಸುತ್ತಿದ್ದರು. ಹೀಗಿರುವಾಗ ಒಂದು ದಿನ ಮಹಾರಾಜರ ಕಂಠಸ್ವರವನ್ನು ಆಲಿಸುವ ಸುಯೋಗ ನನಗೆ ದೊರೆಯಿತು. ನಾನಾಗ ಉಪು-ದಾ ಮಹಾರಾಜರ (ಸ್ವಾಮಿ ಯೋಗೀಶ್ವರಾನಂದರ) ಹಿಂದೆ ನಿಂತಿದ್ದೆ. ಇದ್ದಕ್ಕಿದ್ದಂತೆ ಮಹಾರಾಜರು ಗಂಭೀರ ಸ್ವರದಲ್ಲಿ ಹೇಳಿದರು – ''ಉಪು-ದಾ, ಇದೇನು ಇವತ್ತು ?'' ಉಪು-ದಾ ಉತ್ತರಿಸಿದರು: ''ಮಹಾರಾಜ್, ನಾನು ನಿಮ್ಮ ಗುಲಾಮ!'' ''ಉಪು-ದಾ, ನಾನೂ ನಿಮ್ಮ ಗುಲಾಮ!'' ಉಪು-ದಾ ತಮ್ಮ ಸ್ವಭಾವಸಿದ್ಧ ವಿನಯವಂತಿಕೆಯಿಂದ ತಲೆಬಾಗಿ ಹೇಳತೊಡಗಿದರು, ''ಮಹಾರಾಜ್, ನಾನು ನಿಮ್ಮ ಗುಲಾಮ, ನಾನು ನಿಮ್ಮ ಗುಲಾಮ, ನಾನು ನಿಮ್ಮ ಗುಲಾಮ!'' ಇಬ್ಬರು ಹಿರಿಯ ಸಾಧುಗಳ ವಿನಯ ಹಾಗು ಪರಸ್ಪರ ಶ್ರದ್ಧಾಪೂರ್ಣ ಸಂಭಾಷಣೆಯನ್ನು ಕೇಳಿ ನನಗೆ ಆನಂದವಾಯಿತು.

೧೯೫೦ ರಿಂದ 'ಮಾಯೇರ್ ಬಾಡಿ' – 'ಶ್ರೀಮಾತೆಯವರ ಮನೆ' (ಉದ್ಬೋಧನ್)ಗೆ ಹೋಗಿ ಬರುತ್ತಿದ್ದರಿಂದ ಅಲ್ಲಿನ ಎಲ್ಲ

ಸಾಧುಗಳ ಪರಿಚಯ ನನಗಿತ್ತು. ಸ್ವಾಮಿ ಅದ್ವಯಾನಂದರಿಂದ ನಾನು ಈ ಕೆಳಗಿನ ಘಟನೆಯನ್ನು ನಾನು ಕೇಳಿದ್ದೆ:

ಒಮ್ಮೆ ಮಹಾರಾಜರು ಶ್ರೀಮಾತೆಯವರಿಗೆ ವಿಜಯ ದಶಮಿಯ ಪ್ರಣಾಮವನ್ನು ಮಾಡಲು 'ಮಾಯೇರ್ ಬಾಡಿ'ಗೆ ಬಂದಿದ್ದು, ಪ್ರಣಾಮ ಮಾಡಿದ ನಂತರ ಸ್ವಾಮಿ ಆತ್ಮ ಬೋಧಾನಂದರ ಕೋಣೆಯಲ್ಲಿ ಕುಳಿತರು. ಸಾಧುಗಳೆಲ್ಲರೂ ಮಹಾರಾಜರಿಗೆ ನಮಸ್ಕರಿಸಿದರು. ಇನ್ನೇನು ಅವರು ಬೇಲೂರು ಮಠಕ್ಕೆ ಹೋಗಲು ಹೊರಟು ನಿಂತಾಗ ಸ್ವಾಮಿ ಶ್ರದ್ಧಾನಂದರು ('ಉದ್ಬೋಧನ' ಪತ್ರಿಕೆಯ ಆಗಿನ ಸಂಪಾದಕರು) ಅವರಿಗೆ ಪ್ರಣಾಮ ಮಾಡಿದರು. ಆಗ ಮಹಾರಾಜರು ಸಿಟ್ಟಿನಿಂದ ''ಈ ರೀತಿ ಪ್ರಣಾಮ ಮಾಡುವುದು ತರವಲ್ಲ. ಪ್ರಣಾಮ ಮಾಡುವುದೂ, ಸ್ವೀಕರಿಸುವುದೂ ಸಾಮಾನ್ಯ ವಿಷಯವಲ್ಲ. ಪ್ರಣಾಮ ಸಲ್ಲಿಸುವವನಲ್ಲಿ ಆತ್ಮ ಸಮರ್ಪಣೆಯ ಭಾವವಿರಬೇಕು. ಯಾರಾದರೂ ನನಗೆ ಪ್ರಣಾಮ ಮಾಡಿದರೆ, ನಾನು ಅವರ ಒಳಿತಿಗಾಗಿ ಠಾಕೂರರಲ್ಲಿ ಪ್ರಾರ್ಥಿಸುತ್ತೇನೆ,'' ಎಂದರು.

೧೯೫೫ ರಲ್ಲಿ ಸ್ವಾಮಿ ಬ್ರಹ್ಮಾನಂದಜಿಯವರ ಜನ್ಮಸ್ಥಾನವಾದ ಶಿಕ್ರಾಕುಲೀನ ಗ್ರಾಮದಲ್ಲಿ ಶ್ರೀರಾಮಕೃಷ್ಣ ಮಂದಿರದ ಉದ್ಘಾಟನೆಯನ್ನು ಮಾಡಿ, ಮಹಾರಾಜರು ವೇದಿಕೆಯ ಮೇಲೆ ಠಾಕೂರರ ಚಿತ್ರಪಟವನ್ನು ಸ್ಥಾಪಿಸಿದ ದಿನದಂದು ನಾನಲ್ಲಿ ಉಪಸ್ಥಿತನಿದ್ದೆ. ದಿನವಿಡೀ ಉತ್ಸವ ಜರುಗಿತು; ಅಂದಿನ ಅಲ್ಲಿನ ಅಪೂರ್ವ ಆಧ್ಯಾತ್ಮಿಕ ವಾತಾವರಣವನ್ನು ನಾನು ಎಂದೂ ಮರೆಯಲಾರೆ.

ಮಹಾರಾಜರ ಶಾರೀರಿಕ ಅನಾರೋಗ್ಯದಿಂದಾಗಿ ನಾನು ದೀಕ್ಷೆ ಪಡೆಯುವುದು ತಡವಾಯಿತಾದರೂ, ೧೯೬೧ ಮಾರ್ಚ್ ೩೧ರಂದು ದೀಕ್ಷೆಯಾಯಿತು. ಸ್ವಾಮಿ ಬೋಧಾತೀತಾನಂದಜಿಯವರು ಮಾರ್ಗದರ್ಶಕರಾಗಿ ಉಪದೇಶವನ್ನು ವಿವರಿಸಿದರು. ''ನಿನ್ನ ದೀಕ್ಷೆಯ ಬಗ್ಗೆ 'ಶ್ರೀರಾಮಕೃಷ್ಣ ವಚನವೇದ'ದ ಶೈಲಿಯಲ್ಲಿ ಎಲ್ಲವನ್ನೂ ಬರೆದಿಡು. ಆಗ ಭವಿಷ್ಯತ್ತಿನಲ್ಲಿ ಈ ಘಟನೆಯು ನಿನ್ನ ನೆನಪಿನಲ್ಲಿರುತ್ತದೆ,'' ಎಂದು ಅವರು ನನಗೆ ಸಲಹೆ ನೀಡಿದರು. ನಾನು ಹಾಗೆಯೇ ಮಾಡಿ ಆಗಾಗ ಅದನ್ನು ಓದುತ್ತೇನೆ. ಆ ನನ್ನ ಡೈರಿಯಿಂದ ಮಹಾರಾಜರು ದೀಕ್ಷೆಯನ್ನು ನೀಡುತ್ತಿದ್ದ ವಿಧಿ-ವಿಧಾನವನ್ನು ತಿಳಿಯಬಹುದು.

ದೀಕ್ಷಾರ್ಥಿಗಳು ಒಬ್ಬೊಬ್ಬರಾಗಿ ಮಹಾರಾಜರ ಕೋಣೆಯನ್ನು ಪ್ರವೇಶಿಸಿ, ಅರ್ಘ್ಯವನ್ನು ಕೈಯಲ್ಲಿರಿಸಿಕೊಂಡು ಮಹಾರಾಜರ ಎದುರು ಅರ್ಧವೃತ್ತಾಕರದಲ್ಲಿ ಕುಳಿತರು. ಮಹಾರಾಜರು ಆ ಮೊದಲೇ ತಮ್ಮ ಆಸನದ ಮೇಲೆ ಕುಳಿತಿದ್ದರು. ಅವರೆದುರಿದ್ದ ಮೇಜಿನ ಮೇಲೆ ಒಂದು ತಾಮ್ರದ ಹರಿವಾಣ, ಪೂಜಾ-ಪಾತ್ರೆಗಳು ಹಾಗು ಪುಷ್ಪಪಾತ್ರೆಗಳನ್ನು ಸಜ್ಜುಗೊಳಿಸಲಾಗಿತ್ತು. ಮಹಾರಾಜರು ಗಂಭೀರವಾಗಿ ತಮ್ಮ ವಿಶಾಲ ನೇತ್ರಗಳಿಂದ ನಮ್ಮನ್ನು ದೃಷ್ಟಿಸಿದರು. ನಂತರ ಪೂಜೆ ಪ್ರಾರಂಭವಾಯಿತು. ಅವರು ನಮಗೆಲ್ಲರಿಗೂ ತಮ್ಮ ಸೇವಕರು ನೀಡಿದ ಗಂಗಾಜಲದಿಂದ ಆಚಮನ ಮಾಡಲು ನಿರ್ದೇಶಿಸಿದರು. ತದನಂತರ ತಾವೇ ಸ್ವತಃ ಆಚಮನವನ್ನು ಮಾಡಿ, ಬಿಲ್ವಪತ್ರೆ , ದರ್ಭೆ, ಹೂವು, ಗಂಧಾಕ್ಷತೆಗಳಿಂದ ಕೆಲವು ಅರ್ಘ್ಯಗಳನ್ನು ಸಲ್ಲಿಸಿದರು. ನಾಗಲಿಂಗ, ಗೋಸಂಪಿಗೆ ಹಾಗು ದಾಸವಾಳದ ಹೂವುಗಳಿದ್ದವು. ಹೂಗಳನ್ನು ಬಲಗೈಯಿಂದ ತೆಗೆದುಕೊಂಡು ಎಡಗೈಯಲಿರಿಸಿ, ಕೂರ್ಮ ಮುದ್ರೆಯಲ್ಲಿ ಧ್ಯಾನ ಮಾಡಿ ಅವುಗಳನ್ನು ಎದುರಿಗಿದ್ದ ತಾಮ್ರದ ಹರಿವಾಣದಲ್ಲಿರಿಸಿದರು. ನಾವೆಲ್ಲ ಧ್ಯಾನಸ್ಥರಾಗಿದ್ದ ಅವರನ್ನು ನೋಡುತ್ತಿದ್ದೆವು. ಆ ಬಳಿಕ ಅವರು ಜಪಮಾಲೆಯಲ್ಲಿ ಜಪ ಮಾಡತೊಡಗಿದರು. ಆಗ ಅವರ ತುಟಿಗಳು ಸ್ವಲ್ಪ ಅದರುತ್ತಿದ್ದವು. ಹೀಗೆ ೫-೬ನಿಮಿಷಗಳು ಅವರು ತನ್ಮಯರಾಗಿದ್ದು ಬಳಿಕ ಹೇಳತೊಡಗಿದರು: ''ಈ ಪ್ರಪಂಚದಲ್ಲಿ ಭಗವಂತನೊಬ್ಬನೇ ಸತ್ಯ. ಭಗವಂತನನ್ನು ಪಡೆಯುವುದೇ ಮಾನವ ಜೀವನದ ಉದ್ದೇಶವಾಗಿದ್ದು ಅದನ್ನು ಪಡೆಯುವುದಕ್ಕಾಗಿಯೇ ದೀಕ್ಷೆಯ ಅಗತ್ಯ. ದೀಕ್ಷೆಯನ್ನು ಪಡೆದರೆ ದೇಹ-ಮನಸ್ಸುಗಳು ಶುದ್ಧ ಹಾಗೂ ಪವಿತ್ರವಾಗುವುವು. ತಮ್ಮನ್ನು ತಾವೇ ಭಗವಂತನಿಗೆ ಸಮರ್ಪಿಸಿಕೊಳ್ಳುವುದೇ ದೀಕ್ಷೆಯ ಮುಖ್ಯ ಉದ್ದೇಶ. ಭಜನೆ-ಸಾಧನೆ ಮಾಡಲು ಹಾಗೂ ಭಗವಂತನೆಡೆಗೆ ಮುನ್ನಡೆಯಲು ಏನನ್ನಾದರೂ ಅವಲಂಬಿಸಬೇಕಾಗುತ್ತದೆ. ಅದಕ್ಕಾಗಿಯೇ ಗುರುವಿನ ಆವಶ್ಯಕತೆಯಿರುವುದು.''

ಅನಂತರ ಮಹಾರಾಜರು ೩ ಸಲ ಸ್ಪಷ್ಟವಾಗಿ ಮಂತ್ರವನ್ನು ಉಚ್ಚರಿಸಿ ನಡುವಿನ ಶಬ್ದ(ಬೀಜಮಂತ್ರ)ವನ್ನು ವಿಂಗಡಿಸಿ ಅದರ ಅರ್ಥವನ್ನು ವಿವರಿಸಿದರು. ಠಾಕೂರರೇ ಸರ್ವದೇವದೇವಿ ಸ್ವರೂಪರೆಂಬುದು ಇದರ ಅರ್ಥ. ಈ ಬಗ್ಗೆ ಅವರು ಕೆಲವು ಘಟನೆಗಳನ್ನು ಉಲ್ಲೇಖಿಸಿದರ: ೧) ದಕ್ಷಿಣೇಶ್ವರದಲ್ಲಿ ಮಥುರ ಬಾಬು ಠಾಕೂರರಲ್ಲಿ ಶಿವ ಹಾಗು ಕಾಳಿಯ ರೂಪವನ್ನು ಏಕ ಕಾಲದಲ್ಲಿ ದರ್ಶನ ಮಾಡಿದ್ದರು. ೨) ಒಮ್ಮೆ ಠಾಕೂರರು ಸ್ವಾಮಿ ವಿವೇಕಾನಂದರಿಗೆ, ''ನೀನು ರಾಧೆಯ ರೂಪವನ್ನು ನೋಡಲಿಚ್ಛಿಸುವೆಯಾ?'' ಎಂದು ಕೇಳಿದರು. ಸ್ವಾಮೀಜಿ, ''ನೀವು ಕೃಪೆ ತೋರಿದರೆ ಮಾತ್ರ ನಾನು ದರ್ಶನ ಮಾಡಲು ಸಾಧ್ಯ'' ಎಂದರು. ಆಗ ಅವರು ಸ್ವಾಮೀಜಿಯವರಿಗೆ ರಾಧೆಯ ರೂಪದಲ್ಲಿ ಕಾಣಿಸಿಕೊಂಡರು. ಆಗ ಠಾಕೂರರ ಶರೀರವು ಅಪೂರ್ವ ರೂಪ-ಲಾವಣ್ಯಗಳನ್ನು ಹೊಂದಿದ್ದು ಸಾಕ್ಷಾತ್ ಶ್ರೀ ರಾಧೆಯೇ ತಮ್ಮೆದುರು ನಿಂತಿರುವಂತೆ ಸ್ವಾಮೀಜಿಯವರಿಗೆ ಭಾಸವಾಯಿತು. ೩) ಮತ್ತೊಮ್ಮೆ ಕಾಶೀಪುರದ ಉದ್ಯಾನದಲ್ಲಿ ಶ್ರೀರಾಮಕೃಷ್ಣರು ಸ್ವಾಮೀಜಿಯವರಿಗೆ ಹೇಳಿದರು, ''ಯಾರು ರಾಮನೊ, ಯಾರು ಕೃಷ್ಣನೊ ಆತನೆ ಈಗ ರಾಮಕೃಷ್ಣ. ಆದರೆ ನಿನ್ನ ವೇದಾಂತದ ದೃಷ್ಟಿಯಲ್ಲಲ್ಲ.'' ಏಕೆಂದರೆ ವೇದಾಂತದಲ್ಲಿ ಮೂರ್ತಿಪೂಜೆ ಅಥವ ritual ಗಳಿಗೆ ಸ್ಥಾನವಿಲ್ಲ. ಅದರ ಪ್ರಕಾರ 'ಬ್ರಹ್ಮ' ಮಾತ್ರವೇ ಅಸ್ತಿತ್ವದಲ್ಲಿರುವುದು.

ಅನಂತರ ಮಹಾರಾಜರು ಹೇಳಿದರು, ''ಯಾವುದೇ ದೇವ-ದೇವಿಯರನ್ನು ಪೂಜಿಸಿದರೂ ಅದು ಠಾಕೂರರ ಪೂಜೆಯೇ ಸರಿ. ನಾಮ ಹಾಗೂ ನಾಮಿ ಅಭೇದ. ಗುರು, ಇಷ್ಟಮಂತ್ರ ಇವುಗಳು ಬೇರೆ ಬೇರೆಯಲ್ಲವೆಂದು ತಿಳಿಯಿರಿ. ಶಿವ ಅಥವಾ ಜಗನ್ಮಾತೆಯ ಪೂಜೆಯನ್ನು ಮಾಡುವಾಗ ಠಾಕೂರರ ಪೂಜೆಯನ್ನೇ ಮಾಡುತ್ತಿರುವುದಾಗಿ ತಿಳಿಯಿರಿ.''

''ತೀರ್ಥಯಾತ್ರೆ ಮಾಡುವಾಗ ಭಗವಂತನ ಯಾವುದೇ ಮೂರ್ತಿಯಾಗಲಿ ಸರ್ವದೇವದೇವೀ ಸ್ವರೂಪರಾದ ಠಾಕೂರರೇ ಎದು ತಿಳಿಯತಕ್ಕದ್ದು. **ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ, ಸರ್ವದೇವ ನಮಸ್ಕಾರಂ ಕೇಶವಂ ಪ್ರತಿಗಚ್ಛತಿ** ಎಂಬುದು ಶಾಸ್ತ್ರವಾಕ್ಯ. ಆಕಾಶದಿಂದ ಬಿದ್ದ ಮಳೆ ನೀರು ವಿಭಿನ್ನ ಗತಿಯಲ್ಲಿ ಸಾಗರವನ್ನು ಸೇರುವಂತೆಯೆ ಯಾವ ದೇವತೆಗೆ ನಮಸ್ಕರಿಸಿದರೂ ಅದು ಕೇಶವನನ್ನೇ ಸೇರುತ್ತದೆ.''

ಪ್ರಶ್ನೆ: ಮಹಾರಾಜ್, ನಮಗೇನಾದರೂ ಉಪದೇಶವನ್ನು ನೀಡಿ.

ಮಹಾರಾಜ್: ದಿನಾ 'ಶ್ರೀರಾಮಕೃಷ್ಣ ವಚನವೇದ'ವನ್ನು ಓದಿ. ಎಲ್ಲಾ ಉಪದೇಶಗಳೂ ಅದರಲ್ಲಿವೆ. ಠಾಕೂರರ ಉಪದೇಶಗಳು ನಿಮ್ಮ ಸಂಶಯಗಳನ್ನು ಹೋಗಿಸಲಾಗದಿದ್ದರೆ, ನನ್ನ ಉಪದೇಶದಿಂದಲೂ ನಿಮಗೇನೂ ಪ್ರಯೋಜನವಾಗದು.

ದೀಕ್ಷಾರ್ಥಿಗಳು ಒಬ್ಬೊಬ್ಬರಾಗಿ ಮಹಾರಾಜರ ಬಳಿಸಾರಿ ತಲೆ ಬಾಗಿದಾಗ ಅವರು ಕವಚದಲ್ಲಿ ಸುರಕ್ಷಿತವಾಗಿರಿಸಲಾಗಿದ್ದ ತಮ್ಮ ರುದ್ರಾಕ್ಷಿ ಮಾಲೆಯನ್ನು ಎಲ್ಲರ ಮಸ್ತಕಕ್ಕೂ ಸ್ಪರ್ಶಿಸಿದರು. ಆನಂತರ ನಾವೆಲ್ಲರೂ ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಸಲ್ಲಿಸಿ, ಕೋಣೆಯಿಂದ ಹೊರಬಂದು, ಮತ್ತೆ ಮಂದಿರದಲ್ಲಿ ಠಾಕೂರರರಿಗೆ ನಮಸ್ಕರಿಸಿ, ಮಠದಲ್ಲಿ ಪ್ರಸಾದವನ್ನು ಪಡೆದೆವು.

ಆ ಬಳಿಕ ಸ್ವಾಮಿ ಬೋಧಾತ್ಮಾನಂದರ ಬಳಿಗೆ ಹೋಗಿ ದೀಕ್ಷೆಯ ಎಲ್ಲ ವಿವರಣೆಯನ್ನು ನೀಡಿದಾಗ ಅವರು ನನ್ನನ್ನು, ''ಗುರುದಕ್ಷಿಣೆ ಸಲ್ಲಿಸಿದೆಯಾ?'' ಎಂದು ವಿಚಾರಿಸಿದರು. ನಾನು, ''ಹ್ಞಂ, ಮಹಾರಾಜ್, ನನ್ನ ಬಳಿ ಹಣವಿರಲಿಲ್ಲ.'' ಎಂದೆ. ಅದ್ವೈತ ಆಶ್ರಮದ ಹಣವನ್ನು ಯಾವ ritual ಗೂ ಖರ್ಚು ಮಾಡಲಾಗದು. ಆದ್ದರಿಂದ ಬ್ರಹ್ಮಚಾರಿಯೊಬ್ಬರಿಂದ ಎರಡು ರೂಪಾಯಿಗಳನ್ನು ಪಡೆದು ಅದರಿಂದ ಒಂದು ರೂಪಾಯಿಗೆ ಹಣ್ಣು, ಸಿಹಿತಿಂಡಿಗಳನ್ನು ಕೊಂಡುಕೊಂಡು, ಉಳಿದ ಒಂದು ರೂಪಾಯಿಯನ್ನು ದಕ್ಷಿಣೆಯಾಗಿ ಅರ್ಪಿಸಿದೆ.

ಬೋಧಾತ್ಮಾನಂದಜಿ: ಇಲ್ಲ. ನೀನು ಗುರುದಕ್ಷಿಣೆಯನ್ನು ಸಲ್ಲಿಸಿಲ್ಲ.

ನಾನು: ಮಹಾರಾಜ್, ಒಂದು ರೂಪಾಯಿಯನ್ನು ನಾನು ಸಲ್ಲಿಸಿದ್ದೇನೆ.

ಮಹಾರಾಜ್: ಇಲ್ಲ, ನೀನು ಗುರುದಕ್ಷಿಣೆಯನ್ನು ಕೊಟ್ಟಿಲ್ಲ. ಗುರುದಕ್ಷಿಣೆ ಎಂದರೆ ಏನೆಂದು ನಿನಗೆ ಗೊತ್ತೇನು? ಇಂದು ಗುರುಗಳು ನಿನ್ನ ಹೃದಯದಲ್ಲಿ ಬೀಜಮಂತ್ರವನ್ನು ಬಿತ್ತಿದ್ದಾರೆ. ಸಕಾಲದಲ್ಲಿ ಅದು ಮೊಳಕೆಯೊಡೆದು ಗಿಡವಾಗುತ್ತದೆ. ಕ್ರಮೇಣ ಗಿಡದಲ್ಲಿ ಎಲೆ, ಹೂವು-ಹಣ್ಣುಗಳು ಬಿಡುತ್ತವೆ. ಪಕ್ವವಾದ ಈ ಹಣ್ಣನ್ನು (ಅಂದರೆ ಭಗವಲ್ಲಾಭ) ನೀನು ಗುರುಗಳ ಕೈಗೆ ಕೊಡುವುದೇ ನಿಜವಾದ ಗುರುದಕ್ಷಿಣೆ. ಶಿಷ್ಯನಿಂದ ಗುರುವು ಅಪೇಕ್ಷಿಸುವುದು ಇದೇ ದಕ್ಷಿಣೆಯನ್ನು.

**೧೩ ಜನವರಿ ೧೯೬೩**

ಶನಿವಾರ ಬೆಳಗಿನ ಜಾವ ೩.೧೦ಕ್ಕೆ ಸ್ವಾಮಿ ಶಂಕರಾನಂದಜಿಯವರು ಮಹಾಸಮಾಧಿಯನ್ನು ಹೊಂದಿದರು. ಕೆಲವೇ ಕ್ಷಣಗಳಲ್ಲಿ ಮಠದಿಂದ ಫೋನ್ ಬಂತು. ಮುಂಜಾನೆಯೇ ಹೊರಟು ಬಸ್ಸಿನಲ್ಲಿ ಮಠಕ್ಕೆ ಬಂದಾಗ ಅವ ರನ್ನು ಹಾಸಿಗೆಯ ಮೇಲೆ ಮಲಗಿಸಿರುವುದನ್ನು ನೋಡಿದೆ. ಮಹಾರಾಜರ ಪಾದಗಳನ್ನು ಮುದ್ರಿಸುವ ಕಾರ್ಯವನ್ನು ನನಗೆ ಕೊಡಲಾಗಿತ್ತು. ಅವರ ಕಾಲುಗಳ ಕೆಳಗೆ ಎರಡು ದಿಂಬುಗಳ ನ್ನಿರಿಸಿ ಎರಡೂ ಪಾದಗಳನ್ನು ಕೊಂಚ ಎತ್ತರಿಸಲಾಯಿತು. ಒಬ್ಬರು ಬಟ್ಟೆಯನ್ನು ಕತ್ತರಿಸಿದರೆ ಮತ್ತೊಬ್ಬ ಬ್ರಹ್ಮಚಾರಿ ರಕ್ತ ಚಂದನ, ಶ್ವೇತಚಂದನ, ಆಲ್ತಾ ಮುಂತದವುಗಳನ್ನು ಮಹಾರಾಜರ ಪದತಲಕ್ಕೆ ಲೇಪಿಸ ತೊಡಗಿದರು; ನಾನು, ಕತ್ತರಿಸಲ್ಪಟ್ಟ ಬಟ್ಟೆಯ ತುಂಡುಗಳನ್ನು ಇನ್ನೊಂದು ದಿಂಬಿನ ಮೇಲಿಟ್ಟು ಮಹಾರಾಜರ ಪಾದಗಳಿಗೆ ಅವುಗಳನ್ನು ಹಚ್ಚಿ ಮುದ್ರಿಸಲಾರಂಭಿಸಿದೆ. ಭಕ್ತರಿಗೆಲ್ಲ ಮುದ್ರಿತ ಛಾಪ ಸಿಗುವಂತೆ ಕೆಲವು ಸಾಧು-ಬ್ರಹ್ಮ ಚಾರಿಗಳು ಒಟ್ಟಿಗೆ ಈ ಕಾರ್ಯದಲ್ಲಿ ತೊಡಗಿದ್ದೆವು. ಮಹಾರಾಜರ ಒಂದು ಮುದ್ರಿತ ಛಾಪ ಇಂದಿಗೂ ನನ್ನ ಬಳಿ ಇದೆ. ಮಹಾರಾಜರ ಜಪಮಾಲೆಯನ್ನು ನಾನು ಗಂಗೆಯಲ್ಲಿ ವಿಸರ್ಜಿಸಿಬಿಟ್ಟದ್ದೆ, ಎಂದು ನಂತರ ಪಶ್ಚಾತ್ತಾಪ ಪಡುವಂತಾಯಿತು. ''ಅಯ್ಯೋ, ಅದನ್ನು ಇಟ್ಟುಕೊಂಡಿದ್ದರೆ ಚೆನ್ನಾಗಿತ್ತು!'' ಮುಂದೊಂದು ದಿನ ಸ್ವಾಮಿ ನಿರ್ವಾಣಾನಂದಜಿಯವರನ್ನು ಬೇಡಿದೆ: ''ಮಹಾರಾಜ್, ಸ್ವಾಮಿ ಶಂಕರಾನಂದರು ಉಪಯೋಗಿಸಿದ ಯಾವುದಾದರೂ ವಸ್ತು ಅಥವಾ ಪುಸ್ತಕವನ್ನು ನನಗೆ ಕೊಡಿ,'' ಎಂದು. ಆಗ ಅವರು ನನಗೆ ಕೊಟ್ಟ ಮಹಾರಜರ 'ಶ್ರೀರಾಮಕೃಷ್ಣ ಕಥಾಮೃತ'ದ ಮೂರನೆಯ ಭಾಗವನ್ನು ಇಂದಿಗೂ ನಾನು ಇಟ್ಟುಕೊಂಡಿದ್ದೇನೆ.

ಮಹಾರಾಜರು ಸಾಧಾರಣವಾಗಿ ಗಂಭೀರವಾಗಿಯೇ ಇರುತ್ತಿದ್ದರು. ಪ್ರಚಾರವಿಮುಖರು, ಗಂಭೀರ ಸಾಧನೆ-ಭಜನೆಗಳ ಫಲವಾಗಿ ಅವರ ಸ್ನಾಯುಗಳು ಅತ್ಯಂತ sensitive ಆಗಿದ್ದವು. ಸದ್ದುಗದ್ದಲವನ್ನು ಅವರು ಸಹಿಸುತ್ತಿರಲಿಲ್ಲ. ಮಠದ ಕಟ್ಟಡದ ಜಗುಲಿಯ ಬಳಿಯಿದ್ದ ಮಾವಿನ ಮರದಲ್ಲಿ ಕಾಗೆಗಳು ಮಧ್ಯಾಹ್ನದ ಹೊತ್ತು ಕಾಕಾ ಎಂದು ಕೂಗಾಡುತ್ತಿದ್ದರೆ ಮಹಾ

ರಾಜರಿಗೆ ಬಹಳ ಕಷ್ಟವಾಗುತ್ತಿತ್ತು. ಒಮ್ಮೆ ಬ್ರಹ್ಮಚಾರಿಯೊಬ್ಬ ಮರದ ಪಾದುಕೆಗಳನ್ನು ಮೆಟ್ಟಿಕೊಂಡು ಶಬ್ದ ಮಾಡುತ್ತ ನಡೆಯುತ್ತಿದ್ದುದನ್ನು ನೋಡಿದ ಅವರು ಅವನನ್ನು ಕರೆದು, ''ಈ ಮರದ ಪಾದರಕ್ಷೆಗಳನ್ನು ನನಗೆ ಕೊಡು. ನಾನು ಅವುಗಳ ತಳದಲ್ಲಿ ಟಯರ್ ಹಾಕಿ, ಮೊಳೆ ಹೊಡೆದು ನಿನಗೆ ಕೊಡುತ್ತೇನೆ. ಆಗ ಸದ್ದಾಗುವುದಿಲ್ಲ'' ಎಂದರು.

ಮಹಾರಾಜರ ಸೇವಕರೊಡನೆ ನನಗೆ ನಿಕಟ ಸಂಬಂಧವಿತ್ತು. ಅವರು ನನಗೆ ಮಹಾರಾಜರ ವಿಷಯ ಹೇಳುತ್ತಿದ್ದರು. ಒಮ್ಮೆ ಹಳೆಯ ಭಕ್ತರೊಬ್ಬರು ತಮ್ಮ ಚಿಕ್ಕ ಮಗಳನ್ನು ಕರೆದುಕೊಂಡು ಮಹಾರಾಜರನ್ನು ಕಾಣಲು ಬಂದರು. ಮಹಾರಾಜರು ಅವ ಳೊಂದಿಗೆ ರಾಜೇಂದ್ರ ಪ್ರಸಾದರ (ಅಂದಿನ ಭಾರತದ ರಾಷ್ಟ್ರಪತಿ) ಬಗ್ಗೆ ಮಾತನಾಡಿದರೆ, ಮಗು, ''ಅಪ್ಪಾ, ನನಗೆ ರಾಜೇಂದ್ರ ಪ್ರಸಾದವನ್ನು ತಿನ್ನಲು ಕೊಡು,'' ಎಂದಿತು. ತಕ್ಷಣ ಮಹಾ ರಾಜರು ನನಿಗೋಪಾಲ ಮಹಾರಾಜರನ್ನು ಕರೆದು, ''ನನಿ, ಈ ಮಗುವಿಗೆ ರಾಜೇಂದ್ರ ಪ್ರಸಾದವನ್ನು ಕೊಡು,'' ಎಂದರು. ಕೂಡಲೆ ನನಿ ಗೋಪಾಲ ಮಹಾರಾಜರು ಎರಡು ಸಂದೇಶ (ಬಂಗಾಳಿ ಸಿಹಿ)ಗಳನ್ನು ತಂದು ಮಗುವಿನ ಕೈಯಲ್ಲಿಟ್ಟಾಗ, ಮಹಾರಾಜರು ''ಇಗೋ, ರಾಜೇಂದ್ರಪ್ರಸಾದವನ್ನು ತಿನ್ನು!'' ಎಂದರು.

ಕೆಳಗಿನ ಮೂರು ಪರೋಕ್ಷ ಉಪದೇಶಗಳು ನನ್ನ ಜೀವನ ದಲ್ಲಿ ಅತ್ಯಂತ ಉಪಯುಕ್ತವೆನಿಸಿವೆ. ಇವುಗಳನ್ನು ನಾನು ಇತರ ಸಾಧುಗಳಿಂದ ಕೇಳಿದ್ದು ನನ್ನದೇ ಭಾಷೆಯಲ್ಲಿ ಬರೆದಿಟ್ಟು ಕೊಂಡಿರುವೆ.

ಮೊದಲನೆಯದು: ಬೇಲ್‌ಘರಿಯಾ ರಾಮಕೃಷ್ಣ ಮಿಷನ್ನಿನ ನೃಪೇನ್ ಮಹಾರಾಜರು (ಸ್ವಾಮಿ ಧ್ಯಾನಾತ್ಮಾನಂದ)) ಒಂದು ದಿನ ಮಹಾರಾಜರ ಬಳಿಸಾರಿ ಹೇಳಿದರು:''ಮಹಾರಾಜ್, ರಾಮಕೃಷ್ಣ ಮಿಷನ್ನಿನ ಭವಿಷ್ಯವನ್ನು ಯೋಚಿಸುತ್ತ ಕಳೆದ ಮೂರು ದಿನಗಳಿಂದ ನಾನು ನಿದ್ರಿಸಿಲ್ಲ. ನಾನು ಠಾಕೂರರ ಕೆಲವು ನೇರಶಿಷ್ಯರನ್ನು ನೋಡಿದ್ದೇನೆ. ನಂತರ ಶುದ್ಧಾನಂದಜಿ, ವಿರಜಾನಂದಜಿಯವರನ್ನು ಸಹ ನೋಡಿರುವೆ. ಈಗ ನಿಮ್ಮನ್ನು ನೋಡುತ್ತಿದ್ದೇನೆ. ಈ ನಂತರ ಏನಾಗುವುದು ಎಂದು ಯೋಚಿಸು ತ್ತಿರುವೆ. ಮಹಾರಾಜರು ಗಂಭೀರ ಸ್ವರದಲ್ಲಿ ಹೇಳಿದರು-''ಈ ಸಂಘ ಯಾರದು?'' ಅಷ್ಟೆ. ಈ ಒಂದೇ ಮಾತಿನಲ್ಲಿ ಧ್ಯಾನಾತ್ಮಾ ನಂದರ ಉದ್ವೇಗ, ದುರ್ಭಾವನೆಗಳು ದೂರವಾದವು.

ಎರಡನೆಯದು: ಸಾಧುಗಳೊಬ್ಬರು ಮಹಾರಾಜರ ಬಳಿ ಹೋಗಿ, ''ಮಹಾರಾಜ್, ನಾನು ಮನೆ ಬಿಟ್ಟು ಬಂದಾಗ ಅದೆಷ್ಟು ವೈರಾಗ್ಯ, ವ್ಯಾಕುಲತೆಗಳಿದ್ದವು. ಮಠದಲ್ಲಿ ೨೦ ವರ್ಷ ಗಳನ್ನು ಕಳೆದಿದ್ದೇವೆ. ಈಗ ಹಾಗೆನ್ನಿಸುತ್ತಿಲ್ಲವಲ್ಲ!'' ಎಂದರು. ಮಹಾರಾಜರು ಗಂಭೀರವಾಗಿ, ''ಮನೆಗೆ ಹೋಗು,'' ಎಂದರು. ''ಮಹಾರಾಜ್, ಇದೇನು ಹೇಳುತ್ತಿರುವಿರಿ?'' ''ಈಗಲೇ ಮನೆಗೆ ಹೊರಡು'' ''ಮಹಾರಾಜ್, ನಾನು ಸಂನ್ಯಾಸಿ, ನಾನೇಕೆ ಮನೆಗೆ ಹೋಗಲಿ?'' ''ಮನೆಗೆ ಹೋದರೆ ನಿನ್ನ ಸೋದರ ಹಾಗು ಬಂಧುಗಳು ಸಂಸಾರದಲ್ಲಿ ಬಂಧಿಸಲ್ಪಟ್ಟವರಾಗಿ ಹೇಗೆ ಜೀವನ ನಡೆಸುತ್ತಿದ್ದಾರೆ - ಬಡತನ, ಅಭಾವ, ರೋಗ-ಶೋಕ ಗಳಿಂದ ಜರ್ಜರಿತರಾಗಿ ಒದ್ದಾಡುತ್ತಿರುವುದನ್ನು ನೋಡುತ್ತಿಯೆ. ಅವರ ಜೀವನದೊಂದಿಗೆ ನಿನ್ನದನ್ನು ಹೋಲಿಸಿಕೊಳ್ಳುವ ಅವ ಕಾಶ ಸಿಗುತ್ತದೆ. ನೋಡು, ತ್ಯಾಗ ಹಾಗು ವ್ಯಾಕುಲತೆಗಳು ನಿನ್ನಲ್ಲಿ ಒಂದಾಗಿ ಹೋಗಿರುವುದರಿಂದ ನಿನಗೆ ಅವು ಗೊತ್ತಾಗುತ್ತಿಲ್ಲ. ಮಠದಿಂದ ಹೊರಗೆ ಹೋದೆಯೆಂದರೆ ಈ ವ್ಯತ್ಯಾಸ ತಿಳಿಯು ತ್ತದೆ.''

ಮೂರನೆಯದು: ಅದ್ವೈತ ವೇದಾಂತದ ಸಾಧನೆ ಮಾಡುತ್ತಿದ್ದ ಬ್ರಹ್ಮಚಾರಿಯೊಬ್ಬರು ಮಂದಿರಕ್ಕೆ ಹೋಗುತ್ತಿರಲಿಲ್ಲ. ''ಅಹಂ ಬ್ರಹ್ಮಾಸ್ಮಿ'' ಎಂದೇ ವಿಚಾರ-ಮನನಗಳನ್ನು ಮಾಡುತ್ತಿದ್ದರು. ಆದರೆ ಅವರಿಗೆ ಕರ್ಮ-ಸೇವೆಗಳಲ್ಲಿ ಬಹಳ ನಿಷ್ಠೆಯಿತ್ತು. ಮಹಾರಾಜ್ ಒಂದು ದಿನ ಅವರನ್ನು ಕರೆದು ವಿಚಾರಿಸಿದರು, ''ನೀನು ಮಂದಿರಕ್ಕೆ ಹೋಗುತ್ತೀಯಾ? ನಿಯಮಿತ ಜಪಧ್ಯಾನ ಗಳನ್ನು ಮಾಡುತ್ತೀಯ?'' ಬ್ರಹ್ಮಚಾರಿ: ''ಇಲ್ಲ, ಮಹಾ ರಾಜ್''. ಆಗ ಮಹಾರಾಜ್ ಹೇಳಿದರು, ''ಇಂದಿನಿಂದ ನೀನು ನನ್ನ ಕೋಣೆಯಲ್ಲಿ ಬೆಳಗ್ಗೆ ಹಾಗೂ ಸಾಯಂಕಾಲ ನಿಯಮಿತ ಜಪ-ಧ್ಯಾನಗಳನ್ನು ಮಾಡು. ನೋಡು, ಒಳ್ಳೆಯ ಅಭ್ಯಾಸ ಗಳನ್ನು ಬಿಟ್ಟುಬಿಟ್ಟರೆ, ಅವುಗಳ ಒಂದೊಂದಾಗಿ ಹೋಗಿಬಿಡು ತ್ತವೆ. ಅವುಗಳನ್ನು ಇಟ್ಟುಕೊಂಡಿದ್ದರೆ, ಅವು ನಿನ್ನ ಚಾರಿತ್ರ್ಯ ನಿರ್ಮಾಣದಲ್ಲಿ ನೆರವಾಗುತ್ತವೆ. ಒಳ್ಳೆಯ ಅಭ್ಯಾಸಗಳನ್ನು ಎಂದೂ ಬಿಡಬೇಡ.''

* * *

(ಸ್ವಾಮಿ ಶಂಕರಾನಂದಜಿಯವರು ವೃದ್ಧಾಪ್ಯದಲ್ಲಿ ಹೆಚ್ಚಾಗಿ ಮಲಗಿಯೇ ಇರುತ್ತಿದ್ದರು. ಸ್ವಾಮಿ ಗೋಕುಲಾನಂದರು ಬೇಲೂ ರಿನ ವಿದ್ಯಾಮಂದಿರದಿಂದ ಬಂದು ಪ್ರತಿದಿನ ಅವರಿಗೆ ದಿನಪತ್ರಿಕೆ ಯನ್ನು ಓದಿ ಹೇಳುತ್ತಿದ್ದರು. ಆಗ ಮಹಾರಾಜರು ಹೇಳುತ್ತಿದ್ದ ಕೆಲವು ಅಮೂಲ್ಯವಾದ ಮಾತುಗಳನ್ನು ಅವರ ಡೈರಿಯಲ್ಲಿ ಬರೆ ದಿಡುತ್ತಿದ್ದರು. ಅಧ್ಯಾತ್ಮ ಜೀವನಕ್ಕೆ ಸಂಬಂಧಪಟ್ಟ ಕೆಲವು ವಿಷಯ ಗಳನ್ನು ಅದರಿಂದ ಆಯ್ದುಕೊಳ್ಳಲಾಗಿದೆ. ೮ ಆಗಸ್ಟ್ ೧೯೯೦ರಲ್ಲಿ ದೆಹಲಿಯಲ್ಲಿ ಸ್ವಾಮಿ ಗೋಕುಲಾ ನಂದರು ಡೈರಿಯಿಂದ ೪೧ ಪುಟಗಳನ್ನು xerox ಮಾಡಿ ನನಗೆ ಕೊಟ್ಟರು.)

ಪ್ರಶ್ನೆ: ಈ ಜೀವನದಲ್ಲಿ ಭಗವಂತನನ್ನು ಪಡೆಯಲು ನಾವೇನು ಮಾಡಬೇಕು?

ಮಹಾರಾಜ್: ನಿಮ್ಮಲ್ಲಿ ನೀವು ದೃಢವಾದ ವಿಶ್ವಾಸವಿಡ ಬೇಕು. 'ನಾನು ಪಾಪಿ, ನಾನು ಪಾಪಿ' ಎನ್ನುವವನು ಪಾಪಿಯೇ ಆಗುತ್ತಾನೆ. 'ಈ ಜೀವನದಲ್ಲಿಯೇ ನಾನು ಭಗವಂತನನ್ನು

ಪಡೆಯುವೆ' ಎಂಬ ಭರವಸೆ ಇರಬೇಕು. ಭಗವಂತನನ್ನು ಪಡೆಯುವುದೂ ಆತ್ಮಜ್ಞಾನವನ್ನು ಪಡೆಯುವುದೂ ಒಂದೇ, ಇವೆರಡೂ ಬೇರಲ್ಲ. **ಬ್ರಹ್ಮವಿದ್ ಬ್ರಹ್ಮೈವ ಭವತಿ; ಆತ್ಮವಿದ್ ಆತ್ಮೈವ ಭವತಿ.** ೮೪ ಲಕ್ಷ ಜನ್ಮಗಳ ಬಳಿಕ ಈ ಮನುಷ್ಯ ಜನ್ಮವನ್ನು ಪಡೆದಿದ್ದೇವೆ. ಮನುಷ್ಯ ಶರೀರದ ಮೂಲಕವೇ ಭಗವಂತನ ಪ್ರಾಪ್ತಿಯಾಗುವುದು. ಆದ್ದರಿಂದಲೇ ಮನುಷ್ಯ ಜನ್ಮವನ್ನು ಪಡೆದು ನಾವು ಭಗವಂತನನ್ನು ಪಡೆಯದಿದ್ದರೆ ಜೀವನ ವ್ಯರ್ಥವೆಂದೇ ಹೇಳಬೇಕು.

ಪ್ರಶ್ನೆ: ಇದು ಕರ್ಮದಿಂದ ಸಾಧ್ಯವೇ, ಅಥವಾ exclusively ಜಪಧ್ಯಾನದಿಂದಲೆ?

ಮಹಾರಾಜ್: Exclusively ಜಪಧ್ಯಾನಮಾಡುವುದು ಎಷ್ಟು ಜನರಿಗೆ ತಾನೆ ಸಾಧ್ಯ ? ಆದ್ದರಿಂದಲೇ ಸ್ವಾಮೀಜಿಯವರು ಕರ್ಮದ ವ್ಯವಸ್ಥೆಯನ್ನು ಮಾಡಿ ಹೋಗಿರುವುದು. ಸರಿಯಾದ ಭಾವನೆಯಿಂದ ಮಾಡಿದ್ದೇ ಆದರೆ ಕರ್ಮದಿಂದಲೂ ಭಗವಂತನನ್ನು ಪಡೆಯುವುದು ಸಾಧ್ಯ. ಆದರೆ ವಿಶ್ವಾಸವಿಡಬೇಕು. ಒಂದು ಬಗೆಯ ಹುಳವಿದೆ, ಅದು ಹುಟ್ಟುತ್ತದೆ, ಸಾಯುತ್ತದೆ. ಅದೇ ರೀತಿ ಅದೆಷ್ಟು ಜನ ಬರಿ ಹುಟ್ಟುತ್ತಾರೆ, ಸಾಯುತ್ತಾರೆ!

**೧.೦೯.೧೯೬೦**

ಮಹಾರಾಜ್: ನೋಡು ಕೆಲವರಿದ್ದಾರೆ, ಬರಿ ವಟವಟ ಮಾತನಾಡುತ್ತ ಇತರರನ್ನು ಪೀಡಿಸುತ್ತಾರೆ. ಒಮ್ಮೆ ನಾನು ಮುಂಬೈಯಲ್ಲಿ ಬೋಧಾನಂದರ ಜೊತೆಯಲ್ಲಿದ್ದೆ - ಅವರು ಅಮೆರಿಕಾಗೆ ಹೋಗುವುದಕ್ಕೆ ಮುಂಚೆ. ಪ್ರತಿದಿನವೂ ಊಟವಾದ ಬಳಿಕ ಒಬ್ಬ ವ್ಯಕ್ತಿ ಬರುತ್ತಿದ್ದರು. ಮಧ್ಯಾಹ್ನವೆಲ್ಲ ಬೋಧಾನಂದರೊಡನೆ ಮಾತು. ನಾನು ಅಲ್ಲಿಂದ ಸರಿದು ಹೋಗುತ್ತಿದ್ದೆ. ಒಂದು ದಿನ ಇವನಿಂದ ಬಿಡಿಸಿಕೊಳ್ಳಲು ಏನು ಮಾಡಬೇಕೆಂದು ಸ್ವಾಮಿಗಳು ಕೇಳಿದಾಗ, ''ನೋಡಿ, ನಾಳೆ ಆತ ಬಂದಾಗ ನೀವು ಕೇವಲ 'ಹಾಂ, ಹುಂ, ಹೌದಲ್ಲ' ಎಂದಷ್ಟೇ ಹೇಳಿ, ಬೇರೇನೂ ಹೇಳಬೇಡಿ' ಎಂದು ಸಲಹೆ ಕೊಟ್ಟೆ. ಮರುದಿನ ಊಟದ ಬಳಿಕ ಯಥಾಪ್ರಕಾರ ಆ ವ್ಯಕ್ತಿ ಬಂದರು. ನಾನು ಅಲ್ಲಿಂದ ಸರಿದು ಹೋದೆ. ಬೋಧಾನಂದರು ಬರಿ ''ಹಾಂ, ಹೂಂ, ಸರಿ' ಎಂದಷ್ಟೇ ಹೇಳುತ್ತಿದ್ದು, ಒಂದೆರಡು ತಾಸುಗಳ ಬಳಿಕ ಆ ವ್ಯಕ್ತಿ, 'ಹಾಗಾದರೆ ಇನ್ನು ಹೋಗಿ ಬರುತ್ತೇನೆ' ಎಂದು ಹೋದವರು ಮತ್ತಿನ್ನೆಂದೂ ಬರಲಿಲ್ಲ.

**೨೫.೦೯.೧೯೬೦**

ಮಹಾರಾಜ್: (ಸಾಧು ಒಬ್ಬರ ನಿಷ್ಠೆಯನ್ನು ಕಂಡು): ಈ ಎಲ್ಲ ಸಾಧು-ಬ್ರಹ್ಮಚಾರಿಯರನ್ನು ನೋಡಿ ಕಲಿಯಬೇಕು. ಒಂದು ಭಾವವನ್ನು ತಾಳಬೇಕು. ಅದರೊಂದಿಗೆ ಕಠೋರ ಸಾಧನೆ ಹಾಗು ತಿತಿಕ್ಷೆಯೂ ಅಗತ್ಯ. 'ತಿತಿಕ್ಷೆ' ಎಂದರೇನು?

**'ಸಹನಂ ಸರ್ವದುಃಖಾನಾಂ ಅಪ್ರತೀಕಾರಪೂರ್ವಕಂ, ಚಿಂತಾ ವಿಲಾಪರಹಿತಂ ಸಾ ತಿತೀಕ್ಷಾ ನಿಗದ್ಯತೇ'** — 'ಪ್ರತೀಕಾರ ಮಾಡಲು ಪ್ರಯತ್ನಿಸದೆ ಎಲ್ಲ ದುಃಖಗಳನ್ನೂ ಸಹಿಸಿಕೊಳ್ಳುವುದು ಮತ್ತು ಯಾವ ಬಗೆಯ ಚಿಂತನೆಯನ್ನೂ ವಿಲಾಪವನ್ನೂ ಮಾಡದಿರು ವುದು -ಇದನ್ನು 'ತಿತಿಕ್ಷೆ' ಎನ್ನುತ್ತಾರೆ.'

*(ವಿವೇಕಚೂಡಾಮಣಿ-೨೪)*

ಇದು ಸಾಧುಗಳಿಗೆ ಮಾತ್ರವೇ ಸಾಧ್ಯ. ಆದರೆ ಈಗೀಗ ಸ್ವಲ್ಪ ಏನಾದರೂ ಆದರೆ ಡಾಕ್ಟರ್, ಔಷಧಿ ಇತ್ಯಾದಿ ಎನ್ನುವುದು ಕಂಡುಬರುತ್ತಿದೆ. ನಮ್ಮ ಸಾಧುಗಳಿಗೆ ದೊಡ್ಡ ದೊಡ್ಡ ಡಾಕ್ಟರರ ಸಂಪರ್ಕವಿದೆ. ಇದರಿಂದ ಮತ್ತೂ ದುರ್ಗತಿಗೀಡಾಗುತ್ತಾರೆ.

**೨೩.೦೩.೧೯೬೧**

ಮಹಾರಾಜ್: (ಬ್ರಹ್ಮಚಾರಿಗಳೊಬ್ಬರ ದೀಕ್ಷೆಯನ್ನು ಕುರಿತು) ನಾನು 'ವಚನವೇದ'ವನ್ನು ಓದಲು ಹೇಳುತ್ತೇನೆ. ಪ್ರತಿನಿತ್ಯವೂ 'ವಚನವೇದ'ವನ್ನೋದಿದರೆ ಠಾಕೂರರು ಸರ್ವದೇವದೇವೀ ಸ್ವರೂಪರೆಂಬ ಭಾವನೆ ಬರುತ್ತದೆ. ಠಾಕೂರರೇ ಎಲ್ಲವೂ ಆಗಿದ್ದಾರೆ. ಅವರನ್ನು 'ಅಪ್ಪಾ' ಎಂದೂ ಕರೆಯಬಹುದು. 'ಅಮ್ಮಾ' ಎಂದೂ ಕರೆಯಬಹುದು — ನಿಮ್ಮಿಚ್ಛೆ. 'ಒಂದು' ಎನ್ನುವುದು ಜ್ಞಾನ. 'ಅನೇಕ' ಎನ್ನುವುದು ಅಜ್ಞಾನ.

ಪ್ರಶ್ನೆ: ಸಾಧು ಜೀವನವನ್ನು ನಡೆಸುವ ಪ್ರೇರಣೆ ನಿಮಗೆ ಹೇಗೆ ಸಿಕ್ಕತು?

ಮಹಾರಾಜ್: ಮೊದಲು 'ಕೌಪೀನವಂತಃ ಖಲು ಭಾಗ್ಯವಂತಃ' ಎಂಬುದರಿಂದ. ನಂತರ ಗುಪ್ತ ಮಹಾರಾಜರು (ಸ್ವಾಮಿ ಸದಾನಂದ) ನನ್ನನ್ನು ರಾಜಾ ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಬಳಿಗೆ ಕರೆದುಕೊಂಡು ಹೋದರು. ಆಗ ಮಹಾರಾಜರು ಮಠದ ಕಟ್ಟಡದ ಕೆಳಗಿನ ಗಂಗೆಯ ಕಡೆಯ ಬೆಂಚಿನ ಮೇಲೆ ಕುಳಿತಿದ್ದರು. ನನ್ನನ್ನು ನೋಡಿ, ''ಎಲ್ಲಿ, ನಿನ್ನ ಕೈ ನೋಡೋಣ'' ಎನ್ನುತ್ತ ಕೈಯ ಭಾರವನ್ನು ನೋಡಿ, ''ಸಾಧ್ಯ, ಸಾಧ್ಯ; ನಿನ್ನಿಂದ ಸಾಧ್ಯವಾಗುತ್ತದೆ'' ಎಂದರು.

ಪ್ರಶ್ನೆ: ಡಾಕ್ಟರಿ ಓದುತ್ತ ಓದುತ್ತ ಸಾಧುವಾಗಿಬಿಟ್ಟರೆಂದು ಒಂದು ದಿನ ನೀವು ಹೇಳಿದರಲ್ಲ, ಅದು ಹೇಗೆ?

ಮಹಾರಾಜ್: ಆಗ ನಾನು ಪ್ರತಿನಿತ್ಯವೂ ಗಂಗೆಯಲ್ಲಿ ಸ್ನಾನ ಮಾಡುತ್ತಿದ್ದೆ. ಒಂದು ದಿನ ಸ್ನಾನ ಮಾಡಲು ಹೊರಟವ ಮಠಕ್ಕೆ ಬಂದುಬಿಟ್ಟೆ. ಮನೆಯವರು ಇವನು ಗಂಗೆಯಲ್ಲಿ ಮುಳುಗಿಯೇ ಹೋಗಿರಬೇಕೆಂದು ಬಗೆದರು.

ಪ್ರಶ್ನೆ: ಈಗೀಗ ಕೆಲಸದ ನಡುವೆ ಸಂಜೆ ಅದೆಷ್ಟು ಜಪ-ಧ್ಯಾನ ಮಾಡಬೇಕೋ ಅಷ್ಟು ನನ್ನಿಂದ ಮಾಡಲಾಗುತ್ತಿಲ್ಲ. ಅದ

ಲ್ಲದೆ ಸಂಜೆಯ ಹೊತ್ತಿಗೆ ಅಷ್ಟೊಂದು ನಿಷ್ಠೆಯೂ ಇರುವುದಿಲ್ಲ. ಮನಸ್ಸಿಗೆ ತುಂಬ ಕಸಿವಿಸಿಯಾಗುತ್ತದೆ.

ಮಹಾರಾಜ್: ಕೆಲಸವನ್ನು ಸಾಧನೆಯೆಂದೆ ಮಾಡಬೇಕು. ಕೆಲಸವಿಲ್ಲದಿದ್ದಾಗ ನಿಯಮಿತವಾಗಿ ಜಪಧ್ಯಾನವನ್ನು ಮಾಡು. ಜ್ಞಾನ, ಕರ್ಮ, ಭಕ್ತಿ, ಯೋಗಗಳನ್ನು ನಮ್ಮ ಲಾಂಛನ ಸೂಚಿಸುತ್ತದೆ. ಇವೆಲ್ಲದರ ಸಮನ್ವಯದಿಂದಲೇ ನಾವು ನಮ್ಮ ಜೀವನವನ್ನು ತಯಾರು ಮಾಡಿಕೊಳ್ಳಬೇಕು.

ಪ್ರಶ್ನೆ: 'ಹಗಲು ಹೊತ್ತು ಬಂದೂಕಿನಲ್ಲಿ ಪುಡಿ ತುಂಬುವಂತೆ ತಿನ್ನಬೇಕು' ಎಂದರೇನು?

ಮಹಾರಾಜ್: ಹಾಗೆಂದರೆ, ಹೊಟ್ಟೆಯ ಮೂರು ಭಾಗ ಆಹಾರದಿಂದ ತುಂಬಿಸಿಕೊಳ್ಳವುದು. ವಾಯುವಿನ ಚಲನೆಗಾಗಿ ಒಂದು ಭಾಗ ಯಾವಾಗಲೂ ಜಾಗವಿರಿಸಿಕೊಳ್ಳಬೇಕು.

೧.೦೪.೧೯೬೧

ದೇಹಬುದ್ಧಿಯು ನಾಶವಾದಾಗ ಗಂಗಾಪ್ರಾಪ್ತಿ — ಈ ವಿಷಯವಾಗಿ ಮಹಾರಾಜರು 'ಗಂಗಾಷ್ಟಕಮ್'ನ ಮೂರನೆಯ ಶ್ಲೋಕವನ್ನು ಉಲ್ಲೇಖಿಸುತ್ತ ಹೇಳಿದರು:

**ಕಾಕೈರ್ನಿಷ್ಕುಷಿತಂ ಶ್ವಭಿಃ ಕವಲಿತಂ**
**ಗೋಮಾಯುಭಿರ್ಲುಂಠಿತಂ ।**
**ಸ್ರೋತೋಭಿಶ್ಚಲಿತಂ ತಟಾಂಬುಲುಲಿತಂ**
**ವೀಚೀಭಿರಾಂದೋಲಿತಮ್ ॥**

'ಮೃತ್ಯುವಿನ ಬಳಿಕ ಸ್ವರ್ಗಕ್ಕೆ ಹೋಗಿ ನಾನು ಗಂಗಾಜಲದಲ್ಲಿ ಕಾಗೆಯಿಂದ ಛಿದ್ರಗೊಳಿಸಲ್ಪಟ್ಟು, ನಾಯಿಯಿಂದ ಭಕ್ಷಿಸಲ್ಪಟ್ಟು, ನರಿಯಿಂದ ಧ್ವಂಸವಾಗಿ, ಸ್ರೋತಸಮೂಹದಲ್ಲಿ ಪ್ರವಾಹಿತನಾಗಿ, ತಟವಾರಿಯಲ್ಲಿ ವಿಕ್ಷಿಪ್ತನಾಗಿ, ತರಂಗಗಳಿಂದ ಆಂದೋಲಿತನಾಗುವುದನ್ನು ನಾನೆಂದು ಕಾಣುವೆನೊ?' ದೇಹಬುದ್ಧಿಯನ್ನು ತ್ಯಜಿಸವೇಕೆಂಬುದೇ ಇದರ ತಾತ್ಪರ್ಯ. ಶರೀರಕ್ಕೆ ಯಾವ ಬೆಲೆಯೂ ಇಲ್ಲ. ದೇಹದೊಳಗಿನ ಆತ್ಮಸಂಧಾನವೇ ನಮ್ಮ ಗುರಿ. ಗಂಗಾಸ್ತೋತ್ರದ ಒಂದೆಡೆ ಹೀಗಿದೆ: ''ಮಾತರ್ಗಂಗೇ ತ್ವಯಿ ಯೋ ಭಕ್ತಃ ಕಿಲ ತಂ ದ್ರಷ್ಟುಂ ನ ಯಮಃ ಶಕ್ತಃ'' 'ಅಮ್ಮಾ ಗಂಗೆ, ನಿನ್ನ ಭಕ್ತನ ಮೇಲೆ ಯಮರಾಜನು ತನ್ನ ದೃಷ್ಟಿಯನ್ನು ಬೀರಲು ಅಸಮರ್ಥನು.' ಅಂದರೆ ಅಂಥವನು ಅಮರನು.

ಇದು ಹೇಗೆ ಸಾಧ್ಯ? ಠಾಕೂರರು ಹೇಳುವಂತೆ, ಗಂಗಾವಾರಿ ಬ್ರಹ್ಮವಾರಿ, ವೃಂದಾವನದ ರಜವನ್ನು ಅವರು ಬ್ರಹ್ಮರಜವೆನ್ನುವರು ಹಾಗು ಜಗನ್ನಾಥನ ಮಹಾಪ್ರಸಾದವು ಅವರಿಗೆ ಬ್ರಹ್ಮ ಅನ್ನ — ಅನ್ನಬ್ರಹ್ಮವಾಗಿತ್ತು. ಶಿವನಿಗೆ ಸಂಬಂಧಪಟ್ಟ ಸ್ತೋತ್ರಗಳನ್ನು ಓದಲು ಪ್ರಾರಂಭಿಸು. ಅವುಗಳ ಸೊಗಸೆಂದರೆ, ಎರಡು-ಮೂರು ಸಲ ಓದಿದರೆ ಬಾಯಿಪಾಠವಾಗಿ ಬಿಡುತ್ತವೆ. ಈಗಲೂ ನಾನು ಅವುಗಳನ್ನು ಹೇಳುತ್ತೇನೆ. ಮೊದಲು ಅವೆಲ್ಲ ಬಾಯಿಪಾಠವಾಗಿದ್ದವು, ಈಗ ನಡುನಡುವೆ ತಡವರಿಸುತ್ತದೆ.

ಹೀಗೆ ಹೇಳುತ್ತಲೆ 'ಶಿವಮಹಿಮ್ನ ಸ್ತೋತ್ರ'ದ ಎರಡು ಶ್ಲೋಕಗಳನ್ನು ಹೇಳಿದರು. ನಂತರ ''೧೯೧೩ರಲ್ಲಿ ಕಂಖಲ್‌ನಲ್ಲಿ ಹರಿ ಮಹಾರಾಜರಿಂದ **ಶಿವಮಹಿಮ್ನ ಸ್ತೋತ್ರ**ದ ಅರ್ಥವನ್ನು ತಿಳಿದುಕೊಂಡೆ'' ಎಂದರು.

ರಾಜಾಮಹಾರಾಜರು ಒಮ್ಮೊಮ್ಮೆ ಭುವನೇಶ್ವರದಲ್ಲಿ ಮಂದಿರಕ್ಕೆ ಹೋಗಿ ಪ್ರಣಾಮ ಸಲ್ಲಿಸಿ ನಿಃಶಬ್ದವಾದ ಸ್ಥಳದಲ್ಲಿ ಕುಳಿತು ನನಗೆ ಹೇಳುತ್ತಿದ್ದರು, ''ಒಂದು ಸ್ತೋತ್ರವನ್ನು ಪಠಿಸು.'' ಒಂದು ಬಾರಿ ನಾನು ಶಿವಮಹಿಮ್ನಸ್ತೋತ್ರವನ್ನು ಸಂಪೂರ್ಣವಾಗಿ ಪಠಿಸಿದೆ. ಎಲ್ಲೂ ತಡವರಿಸಲಿಲ್ಲ, ಗೆದ್ದೆ.

ಮಹಾರಾಜರು ತಮ್ಮ ಮನಸ್ಸನ್ನು ಸಹಜವಾಗಿಯೇ ಮೇಲ್ಮಟ್ಟದಲ್ಲಿರಿಸಿ ಕೊಳ್ಳುತ್ತಿದ್ದರು. ಸ್ತೋತ್ರ ಪಠಣವನ್ನಾಗಲಿ, ರಾಮನಾಮ ವನ್ನಾಗಲಿ, ಆಸನದಲ್ಲಿ ಸ್ಥಿರವಾಗಿ ಕುಳಿತು ಆಲಿಸುತ್ತಿದ್ದರು.

ಸಾಧುಜೀವನವನ್ನು ನಡೆಸುವ ಬಗ್ಗೆ ಮಹಾರಾಜರು ಹೇಳಿದರು, ''ನೋಡಪ್ಪ, ಸಾಧುವಾದರೆ ಆಗಿಬಿಡಲಿಲ್ಲ. ೨೪-೨೫ ವರ್ಷಗಳ, ಇಲ್ಲವೆ ೪೦ ವರ್ಷಗಳ ಸಾಧುಗಳೂ ಕೆಡುತ್ತಾರೆ. ಬೇರಾವ ಚಿಂತೆಗಳೂ ಬಾರದಂತೆ ಯಾವಾಗಲು ಮನಸ್ಸನ್ನು ಭಗವಂತನ ಚಿಂತನೆಯಲ್ಲಿಯೇ ಇರಿಸಿಕೊಳ್ಳಬೇಕು. ಇಂದ್ರಿಯ ಲಾಲಸೆ ಬಂದುಬಿಟ್ಟಿತೆಂದರೆ — ಮುಗಿಯಿತು!

ಪ್ರಶ್ನೆ: 'ಇಂದ್ರಿಯ ಲಾಲಸೆ' ಎಂದರೇನರ್ಥ ?

ಮಹಾರಾಜ್: ಇಂದ್ರಿಯಗಳು ಎಷ್ಟಿವೆ? ಐದು ಜ್ಞಾನೇಂದ್ರಿಯಗಳು, ಹಾಗು ಇದು ಕರ್ಮೇಂದ್ರಿಗಳು. ಕಾಮ, ಕ್ರೋಧ, ಲೋಭ, ಮೋಹ, ಮೋಹ, ಮದ (ಅಹಂಕಾರ) ಹಾಗೂ ಮಾತ್ಸರ್ಯಗಳು ಪ್ರಧಾನವಾಗಿದ್ದು, ಇವುಗಳು ಇಂದ್ರಿಯ ವಿಕಾರಗಳು. ಇವುಗಳನ್ನು ದಮನಮಾಡಬೇಕು.

ಪ್ರಶ್ನೆ: ಹಾಗೆಯೇ ಅಂದುಕೊಳ್ಳುತ್ತೇವೆ, ಮಹಾರಾಜ್. ಬಹಳ ಭಾಗ್ಯದಿಂದ ಸದ್ಗುರುಗಳ ಕೃಪೆಯಿಂದಲೇ ಅದು ಸಾಧ್ಯ.

ಮಹಾರಾಜ್: ಅದೇನೋ ಹೌದು. ತುಲಸೀದಾಸರ ಒಂದು ದೋಹೆ ಇದೆ:

**ಸದ್ಗುರು ಪಾವೆ, ಭೇದ ಬತಾವೆ ಜ್ಞಾನ ಕರೇ ಉಪದೇಶ್ ।**
**ತಬ್ ಕೊಯ್ಲಾ ಕೀ ಮೈಲಾ ಛೂಟೆ, ಜಬ್ ಆಗ್ ಕರೇ ಪರದೇಶ್ ॥**

ಅಗ್ನಿಯ ಇದ್ದಿಲಿನ ಕಪ್ಪನ್ನು ಹೇಗೆ ದೂರ ಮಾಡುವುದೋ, ಅದೇ ರೀತಿ ಸದ್ಗುರುವು ಶಿಷ್ಯನ ಅಂತರ್ಯದಲ್ಲಿನ ಮಾಲಿನ್ಯವನ್ನು ದೂರ ಮಾಡುತ್ತಾನೆ.